ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 25-06-1971.

*<u>ಸೇವೆ ಮತ್ತು ತಪಸ್ಸಿನ ಸಮಾನತೆ</u>* (सेवा और तपस्या की समानता)

ತಮ್ಮನ್ನು ವೃಕ್ಷಪತಿಯ ಸಂತಾನ ಎಂದು ತಿಳಿಯುತ್ತೀರಾ? ವೃಕ್ಷದ ಸ್ಮೃತಿಚಿಹ್ನೆ ಭಕ್ತಿಮಾರ್ಗದಲ್ಲಿಯೂ ನಡೆದುಕೊಂಡು ಬಂದಿದೆ. ತಪಸ್ವಿಗಳು ತಪಸ್ಸು ಮಾಡುವಾಗ ವೃಕ್ಷದ ಕೆಳಗೆ ತಪಸ್ಸು ಮಾಡುತ್ತಾರೆ. ಇದರ ರಹಸ್ಯ ಏನಾಗಿದೆ? ವೃಕ್ಷದ ಕೆಳಗೆ ತಪಸ್ಸನ್ನು ಏಕೆ ಮಾಡುತ್ತಾರೆ? ಅದರ ಕಾರಣವೇನು? ಇದು ಏಕೆ ಶುರುವಾಯಿತು, ಇದರ ಬೇಹದ್ದಿನ ರಹಸ್ಯವೇನು, ಈ ಸೃಷ್ಟಿ ರೂಪಿ ವೃಕ್ಷದಲ್ಲಿಯೂ ತಮ್ಮ ನಿವಾಸ ಸ್ಥಾನ ಎಲ್ಲಿದೆ? ವೃಕ್ಷದ ಕೆಳಗೆ ಕುಳಿತಿರುವಿರಲ್ಲವೇ? ಈಗ ಜ್ಞಾನ ಸಹಿತ ಚಿತ್ರಗಳನ್ನು ಮಾಡಲಾಗುತ್ತದೆಯೋ ಅವೇ ನಂತರ ಆ ಸ್ಮೃತಿಚಿಹ್ನೆ ಭಕ್ತಿಮಾರ್ಗದಲ್ಲಿ ನಡೆಯುತ್ತವೆ. ವೃಕ್ಷದ ಚಿತ್ರದಲ್ಲಿ ದೂರದಿಂದ ಏನು ಕಂಡು ಬರುತ್ತದೆ? ತಪಸ್ವಿಗಳು ತಪಸ್ಸು ಮಾಡುತ್ತಿದ್ದಾರೆ, ವೃಕ್ಷದ ಕೆಳಗೆ ತಪಸ್ವಿಗಳು ಹೇಗೆ ಕುಳಿತಿದ್ದಾರೆ? ವೃಕ್ಷದ ಕೆಳಗೆ ಕುಳಿತುಕೊಳ್ಳುವುದರಿಂದ ಸಹಜವಾಗಿ ವೃಕ್ಷದ ಎಲ್ಲಾ ಜ್ಞಾನ ಬುದ್ಧಿಯಲ್ಲಿ ಬರುತ್ತದೆ. ವೃಕ್ಷದ ಕೆಳಗೆ ಕುಳಿತರೆ ಇಚ್ಛೆಯಿಲ್ಲದಿದ್ದರೂ ಹಣ್ಣು, ಹೂ, ಎಲೆಗಳ ಕಡೆಗೆ ಗಮನ ಹೋಗುತ್ತದೆ. ಅದೇ ರೀತಿ ಕಲ್ಪವೃಕ್ಷದ ಕೆಳಗೆ ಬುಡದಲ್ಲಿ ಕುಳಿತರೆ ಇಡೀ ವೃಕ್ಷದ ಜ್ಞಾನ ಬುದ್ಧಿಯಲ್ಲಿ ಸಹಜವಾಗಿರುತ್ತದೆ. ಬೀಜದಲ್ಲಿ ಹೇಗೆ ವೃಕ್ಷದ ಎಲ್ಲಾ ಜ್ಞಾನವಿರುತ್ತದೆಯೋ, ಹಾಗೆಯೇ ಈ ಕಲ್ಪವೃಕ್ಷದ ಅಡಿಪಾಯ ಅಥವಾ ವೃಕ್ಷದ ಕೆಳಗೆ ಬುಡದಲ್ಲಿ ತಮ್ಮನ್ನು ತಾವು ತಿಳಿದುಕೊಂಡರೆ ಇಡೀ ವೃಕ್ಷದ ಜ್ಞಾನ ಸಹಜವಾಗಿ ಬುದ್ಧಿಯಲ್ಲಿ ಬರುತ್ತದೆ. ತಮ್ಮ ಈ ಸ್ಟೇಜನ ಸ್ಮೃತಿಚಿಹ್ನೆ ಭಕ್ತಿಮಾರ್ಗದಲ್ಲಿ ನಡೆದುಕೊಂಡು ಬಂದಿದೆ. ಈಗ ಪ್ರ್ಯಾಕ್ಟಿಕಲ್ ತಪಸ್ಸು ಮಾಡುತ್ತಿದ್ದೀರಿ. ಭಕ್ತಿಮಾರ್ಗದಲ್ಲಿ ಸ್ಥೂಲ ವೃಕ್ಷದ ಕೆಳಗೆ ಕುಳಿತು ತಪಸ್ಸನ್ನು ಮಾಡುತ್ತಾರೆ. ನೋಡಿ, ಆರಂಭದಲ್ಲಿ ತಮಗೆ ನಾವು ವೃಕ್ಷದ ಮೇಲೆ ಕುಳಿತಿದ್ದೇವೆ ಎಂಬ ನಶೆ ಇರುತ್ತಿತ್ತು. ಇಡೀ ವೃಕ್ಷ ಕೆಳಗಿದೆ, ನಾವು ಮೇಲಿದ್ದೇವೆ. ವೃಕ್ಷವನ್ನು ಉಲ್ಟಾ ಮಾಡಿದರೆ ಮೇಲೆ ಹೋಗುತ್ತೇವೆ. ನಾವು ಈ ವೃಕ್ಷದ ಮೇಲೆ ಕುಳಿತು ಇಡೀ ವೃಕ್ಷವನ್ನು ನೋಡುತ್ತಿದ್ದೇವೆ ಎಂದು ಹೇಗೆ ಮೊದಲು ನಶೆ ಬಹಳ ಇರುತ್ತಿತ್ತೋ ಅದೇ ರೀತಿ ಈಗಲೂ ಭಿನ್ನ ಭಿನ್ನ ಪ್ರಕಾರದಿಂದ ತಪಸ್ಸಿನ ನಶೆ ಇರುತ್ತದೆಯೇ? ಮೊದಲಿನ ನಶೆ ಈ ನಶೆಗಿಂತ ಜಾಸ್ತಿಯಿತ್ತೋ ಅಥವಾ ಈಗ ಜಾಸ್ತಿಯಿದೆಯೋ? ಅದು ಕೇವಲ ತಪಸ್ಸಿನ ರೂಪವಿತ್ತು. ಈಗ ತಪಸ್ಸು ಮತ್ತು ಸೇವೆ ಜೊತೆಗಿವೆ. ಅದು ಕೇವಲ ತಪಸ್ಸಿನದಿರುತ್ತಿತ್ತು. ಕೆಳಗೆ ಇಳಿಯುವ ಯಾವುದೇ ಕಾರಣವಿರಲಿಲ್ಲ. ಈಗ ತಪಸ್ಸು ಮತ್ತು ಸೇವೆ ಎರಡೂ ಜೊತೆಗೆ ನಡೆಯುತ್ತವೆ. ಎರಡೂ ಕೆಲಸ ನಡೆಯುತ್ತಿವೆ. ಆದ್ದರಿಂದ ಮಧ್ಯದಲ್ಲಿ ತಮಗೆ ತಾವೇ ನಶೆ ಏರಿಸಿಕೊಳ್ಳಲು ವಿಶೇಷ ಗಮನವಿಟ್ಟುಕೊಳ್ಳಬೇಕು. ಇದನ್ನೇ ಬ್ಯಾಟರಿ ಚಾರ್ಜ್ ಎನ್ನುತ್ತಾರೆ. ನಿಜವಾಗಿಯೂ ಇಡೀ ವೃಕ್ಷ ಪ್ರತ್ಯಕ್ಷ ರೂಪದಲ್ಲಿದೆ ಮತ್ತು ನಾವು ಸಾಕ್ಷಿಯಾಗಿ ಈ ವೃಕ್ಷವನ್ನು ನೋಡುತ್ತಿದ್ದೇವೆ ಎಂಬ ರೀತಿ ಅನುಭವ ಮಾಡುವಿರಿ. ಈ ನಶೆಯೂ ಬಹಳ ಖುಷಿ ಮತ್ತು ಶಕ್ತಿಯನ್ನು ಕೊಡುತ್ತದೆ. ಆದ್ದರಿಂದ ವೃಕ್ಷಪತಿ ಮತ್ತು ವೃಕ್ಷದ ಗಾಯನ ಬಹಳ ಇದೆ. ಈ ರೀತಿ ಭಿನ್ನಭಿನ್ನ ಪ್ರಕಾರದ ಸೇವೆ ಮಾಡುತ್ತಲೇ ತಪಸ್ಸಿನ ಬಲವನ್ನು ತಮ್ಮಲ್ಲಿ ತಾವೇ ತುಂಬಿಕೊಳ್ಳಬೇಕು. ಅದರಿಂದ ತಪಸ್ಸು ಮತ್ತು ಸೇವೆ ಎರಡೂ ಸಂಯುಕ್ತ ಮತ್ತು ಒಟ್ಟಿಗೆ ಇರುವವು. ಸೇವೆಯಲ್ಲಿ ಬಂದಾಗ ತಪಸ್ಸನ್ನು ಮರೆಯುವುದಲ್ಲ. ಸಂಯುಕ್ತ ರೂಪವಲ್ಲವೇ? ಮಧ್ಯದಲ್ಲಿ ಇದರ ಪರಿಶೀಲನೆ ಮಾಡಬೇಕು. ಎಲ್ಲಿಯವರೆಗೆ ಪರಿಶೀಲಕರು ಆಗುವುದಿಲ್ಲವೋ ಅಲ್ಲಿಯವರೆಗೆ ನಿರ್ಮಾತರು ಆಗಲಾರಿರಿ. ಪರೀಕ್ಷಕರಾಗದ ಹೊರತು ವಿಶ್ವ-ನಿರ್ಮಾಪಕ ಅಥವಾ ಶಾಂತಿ- ಸ್ಥಾಪಕರು ಎಂಬ ಗಾಯನವೇನಿದೆಯೋ ಅದಾಗಲಾಗಿರಿ. ತಮ್ಮ ಮೇಲೆ ಬಹಳ ಪರಿಶೀಲನೆ ಬೇಕು. ಬೇರೆಯವರು ಎಷ್ಟೇ ಪರಿಶೀಲನೆ ಮಾಡಲಿ ಆದರೆ ತಮ್ಮನ್ನು ತಾವು ಪರಿಶೀಲನೆ ಮಾಡಿಕೊಳ್ಳುವುದರಿಂದಲೇ ಉನ್ನತಿ ಹೊಂದಬಲ್ಲಿರಿ. ತಮ್ಮನ್ನು ತಾವೇ ಪರಿಶೀಲನೆ ಮಾಡಬೇಕು. ಪರಿಶೀಲನೆಗೆ ಸಮಯ ಬೇಡ, ಯಾವಾಗ ಸಹಜ ಅಭ್ಯಾಸವಾಗುವುದೋ ಆಗ ಸಮಯದ ಅವಶ್ಯಕತೆಯೂ ಇಲ್ಲ. ಸಹಜವಾಗಿ ನಡೆಯುತ್ತಿರುವುದು, ಆಗ ಪರಿಶೀಲನೆಗೆ ಒಂದು ಕ್ಷಣವೂ ಬೇಕಾಗಿಲ್ಲ. ತಮ್ಮನ್ನು ತಾವೇ ಪರಿಶೀಲನೆ ಮಾಡಿಕೊಂಡರೆ ಎಷ್ಟು ಸಮಯ ಬೇಕಾಗುವುದು?

ಎಷ್ಟೇ ವ್ಯಸ್ತರಾಗಿದ್ದರೂ ಒಂದು ಕ್ಷಣವನ್ನು ತೆಗೆಯಬಹುದು. ಕೇವಲ ಅಭ್ಯಾಸದ ಅವಶ್ಯಕತೆಯಿದೆ. ಪರಿಶೀಲಿಸುವ ಮಾಸ್ಟರ್ ಆಗಬೇಕು. ಎಲ್ಲದರಲ್ಲಿಯೂ ಮಾಸ್ಟರ್ ಆಗಬೇಕು. ಹೇಗೆ ಮಾಸ್ಟರ್ ಸರ್ವಶಕ್ತಿವಂತ, ಮಾಸ್ಟರ್ ಜ್ಞಾನಪೂರ್ಣರಾಗಿದ್ದೀರೋ ಹಾಗೆ ಪರಿಶೀಲಿಸುವ ಮಾಸ್ಟರ್ ಆಗಿ, ಒಳ್ಳೆಯದು.

ಡ್ರಾಮಾನುಸಾರ ಎಲ್ಲವೂ ಸರಿಯಾಗಿಯೇ ನಡೆದಿದೆ. ಆದರೆ ಸರಿಯಾಗಿ ನಡೆದಾಗಲೂ ಪರಿಶೀಲನೆ ಬೇಕು, ಕಲ್ಯಾಣಕಾರಿ ಯುಗವಾಗಿದೆ ಎಂಬುದನ್ನೂ ತಿಳಿದಿದ್ದೀರಿ, ಆದರೂ ಪ್ರತಿಯೊಬ್ಬರಿಗೂ ತಮ್ಮ ಮತ್ತು ಬೇರೆಯವರ ಕಲ್ಯಾಣದ ಯೋಜನೆಯ ಬಗೆಗೆ ಯೋಚಿಸಬೇಕಾಗುತ್ತದೆ. ಈ ಸ್ಥಿತಿ ಹೆಚ್ಚಾಗುವಂತಹ ಹೊಸ ಯೋಜನೆಗಳನ್ನು ಮಾಡಿ. ಎಲ್ಲರೂ ನಡೆಯುತ್ತಿರುವಿರಿ ಮತ್ತು ನಡೆಯುವಿರಿ ಆದರೆ ಮಧ್ಯದಲ್ಲಿ ಯೋಜನೆ ಅಥವಾ ಸಹಯೋಗದಿಂದ ಹೆಚ್ಚಿನ ಬಲ ಸಿಕ್ಕರೆ ಜಿಗಿತ (ಜಂಪ್) ಬರುವುದು. ಹೇಗೆ ರಾಕೆಟ್ ಗೂ ಅಗ್ನಿಯ ಬಲವನ್ನು ಕೊಡಲಾಗುತ್ತದೆ ಆಗ ಹಾರುತ್ತದೆ. ಅದೇ ರೀತಿ ಲೈಟ್ ಮತ್ತು ಮೈಟ್ ನ ಬಲ ಸಿಕ್ಕರೆ ಜಂಪ್ ಮಾಡಬಹುದು. ಇದಕ್ಕಾಗಿ ಹೆಚ್ಚುವರಿ ಬಲದ ಸಹಯೋಗದಿಂದ ಶಕ್ತಿಯ ಪ್ರಾಪ್ತಿಯ ಅನುಭವವಾಗುತ್ತದೆ. ಇದೂ ಅವಶ್ಯಕವಾಗಿದೆ. ಒಂದು ಮನನ ಶಕ್ತಿ ಬಹಳ ದುರ್ಬಲವಾಗಿದೆ. ಆದ್ದರಿಂದ ವ್ಯರ್ಥ ಸಂಕಲ್ಪಗಳನ್ನು ಹೇಗೆ ನಿಯಂತ್ರಣ ಮಾಡಬೇಕು ಎಂದು ಬಹುಸಂಖ್ಯಾತರ ವರದಿ  ಇದೆ. ಈ ಮುಖ್ಯ ದುರ್ಬಲತೆಯನ್ನು ಹೇಗೆ ಪರಿಶೀಲನೆ ಮಾಡಿ ಸಮಾಪ್ತಿ ಮಾಡಬೇಕು ಎಂಬ ಯೋಜನೆಯ ಬಗೆಗೆ ಯೋಚಿಸಿ. ದುರ್ಬಲತೆಗಳು ಗೊತ್ತೇ ಆಗುತ್ತವೆ. ಅವುಗಳ ಬಗೆಗೆ ತಿಳುವಳಿಕೆ ಕೊಡುವುದರಿಂದ ಒಳಗೆ ಹತ್ತಿಕ್ಕಲ್ಪಡುತ್ತವೆ. ಆದರೆ ಸಂಸ್ಕಾರಗಳನ್ನು ನಾಶ ಮಾಡುವುದಿಲ್ಲ. ಆದ್ದರಿಂದ ಸ್ವಲ್ಪ ಸಮಯದ ನಂತರ ಬಹುಸಂಖ್ಯಾತರ ವರದಿ ಇದೇ ಆಗಿರುತ್ತದೆ. ಭಟ್ಟಿ ಮುಂತಾದವುಗಳಿಂದ ಹೆಚ್ಚಿನ ಬಲ ಸಿಗುತ್ತದೆ. ಸ್ವಲ್ಪ ಪರಿವರ್ತನೆಯೂ ಆಗುತ್ತದೆ. ಆದರೆ ಇಲ್ಲಿಂದ ಯಾವ ಬಲವನ್ನು ತೆಗೆದುಕೊಂಡು ಹೋಗುತ್ತೀರೋ ಅದು ಸದಾಕಾಲವಿರಲು ಯೋಜನೆಗಳನ್ನು ಯೋಚಿಸಿ. ಶಕ್ತಿಯಿಲ್ಲವೆಂದು ಅನೇಕರ ದೂರು ಇದೆ. ಜ್ಞಾನವಿದೆ, ಆದರೆ ಜ್ಞಾನಕ್ಕೆ ಪ್ರಕಾಶ ಮತ್ತು ಶಕ್ತಿ ಎಂದು ಕರೆಯಲಾಗುತ್ತದೆ. ಜ್ಞಾನದಿಂದ ತಮ್ಮಲ್ಲಿ ಶಕ್ತಿಯನ್ನು ತುಂಬಿಕೊಳ್ಳುವ ವಿಧಿ ಗೊತ್ತಿಲ್ಲ. ತಮ್ಮ ಬಳಿ ಬೆಂಕಿ ಪೊಟ್ಟಣವಿದೆ ಆದರೆ ಅದರಿಂದ ಬೆಂಕಿ ಹಚ್ಚುವ ವಿಧಿ ಗೊತ್ತಿಲ್ಲದ ಕಾರಣ ಕಾರ್ಯವನ್ನು ಸಿದ್ಧ ಮಾಡಲಾರಿರಿ. ಆದ್ದರಿಂದ ಜ್ಞಾನ ಎಲ್ಲರಿಗೂ ಇದೆ ಆದರೆ ಜ್ಞಾನದಿಂದ ಕೆಲವರು ಪ್ರಕಾಶ ಮತ್ತು ಹಗುರತೆಯ(ಲೈಟ್) ಹಾಗೂ ಶಕ್ತಿಯ (ಮೈಟ್) ಅನುಭವ ಮಾಡುತ್ತಾರೆ ಮತ್ತೆ ಕೆಲವರು ಕೇವಲ ಜ್ಞಾನವನ್ನು ತಿಳಿದುಕೊಂಡು ವರ್ಣನೆ ಮಾಡುತ್ತಾರೆ. ಜ್ಞಾನದಿಂದ ತಮ್ಮಲ್ಲಿ ಶಕ್ತಿಯನ್ನು ಹೇಗೆ ತರುವುದು ಎಂಬುದರ ಬಗೆಗೆ ಭಿನ್ನ ಭಿನ್ನ ಯುಕ್ತಿಗಳಿಂದ ಬಲ ತುಂಬಿಕೊಳ್ಳಲು ಜಿಗಿತ  ಇರಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 25-06-1971.

***ಸೇವೆ ಮತ್ತು ತಪಸ್ಸಿನ ಸಮಾನತೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವೃಕ್ಷ ಪತಿಯ ಸಂತಾನವಾಗಿದ್ದೇನೆ.

2. ನಾನು ಭಿನ್ನ-ಭಿನ್ನವಾದ ಸೇವೆಯನ್ನು ಮಾಡಿ ಸ್ವಯಂನಲ್ಲಿ ತಪಸ್ಸಿನ ಬಲವನ್ನು ತುಂಬಿಕೊಂಡಿದ್ದೇನೆ.

3. ನನ್ನನ್ನು ನಾನು ಪರಿಶೀಲಿಸಿಕೊಂಡು "ವಿಶ್ವ ನಿರ್ಮಾಪಕರು ಮತ್ತು ಶಾಂತಿ ಸ್ಥಾಪಕರು" ಎಂಬ ಮಹಿಮೆಗೆ ಯೋಗ್ಯವಾಗಿ ತಯಾರಾಗಿದ್ದೇನೆ.

4. ನಾನು ನನ್ನ ಲೈಟ್ ಮತ್ತು ಮೈಟ್ ನ ಫೋರ್ಸ್ ನಿಂದ ಇತರ ಆತ್ಮರನ್ನು ಹೈಜಂಪ್ ಮಾಡಿಸಿದ್ದೇನೆ.

5. ನಾನು ಮನನ ಶಕ್ತಿಯಿಂದ ವ್ಯರ್ಥ ಸಂಕಲ್ಪಗಳನ್ನು ಬಲಹೀನತೆಗಳನ್ನು ಸಮಾಪ್ತಿ ಮಾಡಿದ್ದೇನೆ.